**Spl. C. 5243/2024**

**ಚಾ.ಸಾ :9 ಪ್ರಾ.ಸಾ :8**

**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಪೀಠ ಸಿಂಧನೂರು**

| | | |
|---|---|---|
| ಸಾಕ್ಷಿಯ ಹೆಸರು | : | ಸತ್ಯನಾರಾಯಣರೆಡ್ಡಿ ರಾವೋರಿ |
| ತಂದೆ ಹೆಸರು | : | ನರಸರೆಡ್ಡಿ ರಾವೋರಿ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ನಿವೃತ್ತ ನೌಕರರು |
| ವಿಳಾಸ | : | ಬೆಂಗಳೂರು |

**ಸಾಕ್ಷಿಗೆ ದಿನಾಂಕ 24-10-2024 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯವಿಚಾರಣೆ : ವಿಶೇಷ ಸರ್ಕಾರಿ ಅಭೀಯೋಜಕರಿಂದ :**

ನನಗೆ ಆರೋಪಿಯ ಪರಿಚಯ ಇದೆ. ನನ್ನಮನೆಯ ನಂಬರ್ 403, ಇದು ಮೊದಲನೇ ಕ್ರಾಸ್, 10 ನೇ ಮೇನ್, ಡಾಲರ್ಸ್ ಕಲೋನಿ, 4 ನೇ ಫೇಸ್ ಜೆ.ಪಿ. ನಗರ, ಬೆಂಗಳೂರಿನಲ್ಲಿ 2003 ರಿಂದ ಇರುತ್ತದೆ. ನಾನು ಈಗ ನೋಡುತ್ತಿರುವ ನಿ.ಪಿ.9 ರಲ್ಲಿರುವ ದಿನಾಂಕ 27-10-2014 ರ ಬಾಡಿಗೆ ಪತ್ರವನ್ನು ಸೋಹೇಲ್ ಪಾಷ ಎಂಬಾತನೊಂದಿಗೆ ಮಾಡಿಕೊಂಡಿದ್ದೆನು. ನಾನು ಆತನಿಗೆ ನನ್ನಮನೆಯನ್ನು ಬಾಡಿಯಿಂದ ನೀಡಿದ್ದೇನು. ಮನೆಯ ಬಾಡಿಗೆ ಪ್ರತಿ ತಿಂಗಳು 7,500/- ರೂಪಾಯಿ ಇತ್ತು. ಆತ ನನಗೆ 25,00,000/- ರೂಪಾಯಿ ಹಣವನ್ನು ಠೇವಣಿಯಾಗಿ ಕೊಟ್ಟಿದ್ದನು. ಅವರು ನನ್ನಮನೆಯಲ್ಲಿ ಅಕ್ಟೋಬರ್ 2014 ರಿಂದ 2016 ರವರೆಗೆ ಒಟ್ಟು 2 ವರ್ಷ ಬಾಡಿಗೆಯಿಂದ ವಾಸವಿದ್ದರು. ಅವರು ನನಗೆ ಪ್ರತಿ ತಿಂಗಳು ಬಾಡಿಗೆ ಕೊಟ್ಟಿದ್ದಾರೆ. ಮನೆ ಬಿಟ್ಟ ನಂತರ ನಾನು ಅವರಿಗೆ ಠೇವಣಿಯ ಹಣವನ್ನು ಚೆಕ್ ಮೂಲಕ ನೀಡಿರುತ್ತೇನೆ. ಸಾಕ್ಷಿ ನಿ.ಪಿ.9 ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ. 9(ಡಿ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಬಾಡಿಗೆದಾರರು ನನಗೆ ಮುಂಗಡ ಹಣವನ್ನು ಆರ್. ಟಿ.ಜಿ.ಎಸ್. ಮೂಲಕ ಪಾವತಿ ಮಾಡಿದ್ದರು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

2. ನ್ಯಾಯಾಲಯದ ಮುಂದಿರುವ ಆರೋಪಿ ನಿ.ಪಿ.9 ರಲ್ಲಿರುವ ಬಾಡಿಗೆ ಪತ್ರದಲ್ಲಿ ಪಕ್ಷಗಾರನು ಇರುವುದಿಲ್ಲ ಅಂದರೆ ಸರಿ. ಸೊಹೇಲ್ ಈತನು ಆರೋಪಿ ತನ್ನ ತಂದೆ ಇದ್ದಾನೆ

**Spl. C. 5243/2024**
**ಚಾ.ಸಾ :9 ಪ್ರಾ.ಸಾ :8**

ಹೇಳಿದ್ದನು ಅಂದರೆ ಸರಿ. ನಾನು ಈ ದಿನಕ್ಕಿಂತ ಮೊದಲು ಆರೋಪಿಯನ್ನು ಒಂದು ಬಾರಿ ನೋಡಿದ್ದೆನು. ನಿ.ಪಿ.9 ರಲ್ಲಿರುವ ವ್ಯವಹಾರದಲ್ಲಿ ಆರೋಪಿ ಹಾಜರಿಲಿಲ್ಲ ಮತ್ತು ಭಾಗವಹಿಸಿರುವುದಿಲ್ಲ ಅಂದರೆ ಸರಿ. ಸೊಹೇಲ್ ಪಾಷ ಈತನು ಐ.ಸಿ.ಐ.ಸಿ.ಐ., ಬ್ಯಾಂಕಿನಲ್ಲಿ ಉದ್ಯೋಗ ಮಾಡುತ್ತಿದ್ದನು ಅಂದರೆ ಸರಿ. ನಾನು ಬಾಡಿಗೆಯನ್ನು ಬ್ಯಾಂಕಿನ ಖಾತೆಯ ಮೂಲಕ ಪಡೆದಿದ್ದೇನೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು